ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮ ಮೇಲೆ ನನ್ನ ತಕರಾರು ಇಲ್ಲ. ನಾನು ನಿಮ್ಮ ಜಾಗದಲ್ಲಿ ಇದ್ದಿದ್ದರೆ ನಾನೂ ಇದನ್ನೇ ಹೇಳಬೇಕಾಗುತ್ತದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಯಾರು ಇದ್ದರೂ ಇದೇ ಉತ್ತರವನ್ನು ಕೊಡುವುದು. ಆದರೆ ಇಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆ? ನಾನು ಅದನ್ನು ಕೇಳುತ್ತಿದ್ದೇನೆ. ತಾವು ಅಧಿಕಾರಿಗಳನ್ನು ಚುರುಕುಗೊಳಿಸಿ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಪೆಟ್ರೋಲ್ ರೇಟ್ ಕಡಿಮೆ ಮಾಡುವುದಿಲ್ಲವಾ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೂ ಉತ್ತರವನ್ನು ಕೊಟ್ಟು ಬಿಡಬಹುದಿತ್ತು.

ಅಧ್ಯಕ್ಷರು : ಆಯಿತು, ಇನ್ನು ಪದ್ಮನಾಭ ಕೊಟ್ಟಾರಿಯವರು ...

(ಪ್ರಶ್ನೆ 205(821) ಇದಕ್ಕೆ ಸಂಬಂಧಪಟ್ಟ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು : ಮಾನ್ಯ ಕೆ. ಪದ್ಮನಾಭ ಕೊಟ್ಟಾರಿಯವರ ಪ್ರಶ್ನೆ ಹಗೂ ಮಾನ್ಯ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪನವರ ಪ್ರಶ್ನೆ, ಶ್ರೀ ಕೆ. ಅಭಯ ಚಂದ್ರ....

(ಪ್ರಶ್ನೆ: 206(820) ಹಾಗೂ ಪ್ರಶ್ನೆ : 209(1065) ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿರಲಿಲ್ಲ)

ವಿಷಯ: ಗಣಕೀಕೃತ ಪಹಣಿ ಪತ್ರಿಕೆಯ ಪ್ರತಿ ಪಡೆಯಲು ವಿಧಿಸಿರುವ ಶುಲ್ಕವನ್ನು ಕಡಿಮೆ ಮಾಡುವುದು.

207 (1281) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಣಕೀಕೃತ ಪಹಣಿ ಪತ್ರಿಕೆಯ ಪ್ರತಿಯನ್ನು ಪಡೆಯಲು ಸರ್ಕಾರವು ನಿಗದಿಪಡಿಸಿರುವ ಶುಲ್ಕದ ವಿವರಗಳೇನು;

ಆ) ಶುಲ್ಕವನ್ನು ಕಡಿಮೆ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ವಿವರಗಳೇನು;

ಇ) ಪ್ರಸ್ತುತದ ವ್ಯವಸ್ಥೆಯಲ್ಲಿ ಗ್ರಾಮಾಂತರದ ಜನರು ತಾಲ್ಲೂಕು ಕೇಂದ್ರಕ್ಕೆ ಬಂದು ಪಹಣಿ ಪತ್ರಿಕೆ ಪಡೆಯಲು ಜನರಿಗೆ ಅನುಕೂಲವಾಗುವುದರಿಂದ ತಂತ್ರಜ್ಞಾನ ಬಳಕೆಯನ್ನು ಬಳಸಿಕೊಂಡು ಹೋಬಳಿ ಮತ್ತು ಪಂಚಾಯತ್ ಮಟ್ಟದಲ್ಲಿ ಪಹಣಿ ಪತ್ರಿಕೆ ನೀಡಲು ಸರ್ಕಾರ ವ್ಯವಸ್ಥೆಗೊಳಿಸಲು ಕ್ರಮ ಕೈಗೊಂಡಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ರೂ. 15.

ಆ) ಇಲ್ಲ.

ಇ) ಹೌದು. ಸಧ್ಯದಲ್ಲಿಯೆ ಈ ಯೋಜನೆಯನ್ನು ರಾಜ್ಯದ ಎಲ್ಲಾ ಹೋಬಳಿಗಳಿಗೂ ವಿಕೇಂದ್ರೀಕರಿಸಲಾಗುವುದು.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪಹಣಿ ಪತ್ರದ ಪ್ರತಿಯನ್ನು ಪಡೆಯುವುದಕ್ಕೆ ತಾಲ್ಲೂಕು ಮಟ್ಟದಲ್ಲಿ 15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ, ಈಗಾಗಲೇ ಕಳೆದ ಸಲವೂ ಸರ್ಕಾರ ಹೋಬಳಿ ಮಟ್ಟದಲ್ಲೂ, ಇದನ್ನು ತರುವಂತಹ ಕೆಲಸವನ್ನು ಮಾಡುತ್ತೇವೆ, ರೂ. 15 ಏನು ಇದೆ, ಅದನ್ನು ಕಡಿಮೆ ಮಾಡುತ್ತೇವೆನ್ನುವ ವಿಚಾರವನ್ನು ಹೇಳಿದ್ದಾರೆ. ಆದುದರಿಂದ ಇದನ್ನು ಮರು ಪರಿಶೀಲನೆಯನ್ನು ಮಾಡಬೇಕು. ಇದರ ಜೊತೆಗೆ ಈಗ ಗ್ರಾಮ ಪಂಚಾಯತ್ ಮಟ್ಟದಲ್ಲೂ ಈ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು, ನಾನು ತಮ್ಮ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಗ್ರಾಮ ಪಂಚಾಯತ್ ಮಟ್ಟದಲ್ಲೂ ಕೂಡ, ಕಂಪ್ಯೂಟರ್ ಅನ್ನು ಅಳವಡಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಹಾಗಾಗಿ ಅಲ್ಲಿಯೂ ಕೂಡ ಗ್ರಾಮಸ್ಥರಿಗೆ ಅದನ್ನು ಪಡೆಯಲು ಅನುಕೂಲವಾಗುತ್ತದೆ. ಇದರ ಜೊತೆಗೆ ವಿದ್ಯುತ್ ಬಿಲ್ ಅನ್ನು, ಬೇರೆ ಬೇರೆ ವಿಚಾರಗಳನ್ನು ಮಾಡಲು ಅನುಕೂಲ ಆಗುತ್ತದೆ. ಇದರ ಬಗ್ಗೆ ಖಾಸಗಿಯವರು ಆಸಕ್ತಿಯನ್ನು ಹೊಂದಿದ್ದಾರೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿಕೊಂಡು, ಮುಂದಿನ ದಿವಸಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲೂ ಕೂಡ ಈ ವ್ಯವಸ್ಥೆಯನ್ನು ಮಾಡುತ್ತಾರಾ ಎಂಬುದನ್ನು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಭಾಕರ ಬಂಗೇರರವರು ಸವಿಸ್ತಾರವಾಗಿ ಏನು ಪ್ರಶ್ನೆಯನ್ನು ಕೇಳಿದ್ದಾರೆ. ಅದು ಪಹಣಿ ಪತ್ರದ ಕಂಪ್ಯೂಟರೈಜ್ ಆಗುವ ವಿಚಾರದ ಬಗ್ಗೆ, ಇದು ಹೋಬಳಿ ಮಟ್ಟಕ್ಕೆ ವಿಸ್ತರಣೆ ಮಾಡುವ ಬಗ್ಗೆ ಪ್ರಶ್ನೆ ಇದೆ. ಹಿಂದೆ ಇದೇ ಅಧಿವೇಶನದಲ್ಲಿ ನಾನು ಇದರ ಬಗ್ಗೆ ಬೇರೆ ಸನ್ನಿವೇಶದಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಈಗಾಗಲೇ 175 ಕೇಂದ್ರಗಳಲ್ಲಿ ಈ ಕಂಪ್ಯೂಟರೀಕರಣದಲ್ಲಿ ಪಹಣಿ ಪತ್ರವನ್ನು ಕೊಡುವ ವ್ಯವಸ್ಥೆ ಇದೆ. ಇದನ್ನು 800 ಹೋಬಳಿ ಕೇಂದ್ರಗಳಿಗೆ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರ ನಿರ್ಧಾರವನ್ನು ತೆಗೆದುಕೊಂಡಿದೆ. ಇನ್ನು 6 ತಿಂಗಳೊಳಗೆ ಈ 800 ಹೋಬಳಿ ಕೇಂದ್ರಗಳಲ್ಲಿ ಕಂಪ್ಯೂಟರೀಕರಣದ ಪಹಣಿ ಪತ್ರವನ್ನು ಪಡೆಯುವುದಕ್ಕೆ ಸೌಲಭ್ಯವನ್ನು ಮಾಡುತ್ತೇವೆ. ಇನ್ನೊಂದು ಬಹಳ ಮಹತ್ವವಾದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದು ಏನೆಂದರೆ ಇವತ್ತು ನಾವು ಕೇವಲ ಕೃಷಿ ಭೂಮಿಯ ಲ್ಯಾಂಡ್ ರೆಕಾರ್ಡ್ಸ್ ಬಗ್ಗೆ ಮಾತ್ರ ಪಹಣಿ ಪತ್ರಗಳನ್ನು ಕಂಪ್ಯೂಟರೈಜ್ ಮುಖಾಂತರ ಕೊಡುವಂಥಾದ್ದು ಇತ್ತು. ಇನ್ನು ಮುಂದೆ ಹಲವಾರು ಸೌಲಭ್ಯಗಳನ್ನು ವಿಸ್ತರಣೆ ಮಾಡುವಂತಹ ಆಲೋಚನೆಯನ್ನು ಮಾಡುತ್ತಿದ್ದೇವೆ, ಮತ್ತೆ ಅವುಗಳನ್ನು ಅನುಷ್ಟಾನವನ್ನು ಮಾಡುತ್ತೇವೆ. ಅದು ಯಾವುವೆಂದರೆ ಜನನ–ಮರಣಗಳ ದಾಖಲೆಗಳು, ಇದನ್ನು ಕಂಪ್ಯೂಟರೈಜ್ ಮುಖಾಂತರ ಕೊಡುವಂತಹ ವ್ಯವಸ್ಥೆ ಅದೇ ರೀತಿಯಲ್ಲಿ, ಇವತ್ತು ಜಾತಿ ಸರ್ಟಿಫಿಕೇಟ್‌ಗಳನ್ನು ಕೊಡುವಂಥಾದ್ದು ಇರಬಹುದು, ಮತ್ತೆ ಇನ್ನಿತರ ಓಲ್ಡ್‌ಏಜ್ ಪೆನ್‌ಷನ್ ಹ್ಯಾಂಡಿಕ್ಯಾಪ್ಟ್ ಪೆನ್‌ಷನ್ ಬಗ್ಗೆ ಇರಬಹುದು. ಆದಾಯ ಸರ್ಟಿಫಿಕೇಟ್ ಇರಬಹುದು. ಎಲ್ಲವನ್ನು ಕಂಪ್ಯೂಟರ್‌ಗಳಲ್ಲಿ ದಾಖಲೆ ಮಾಡಿ, ಅದರ ಮುಖಾಂತರ ಯಾರಾದರೂ ಬಂದ ಸಂದರ್ಭದಲ್ಲಿ, ಅವರ ಬಗ್ಗೆ

ಇರುವಂತಹ ಮಾಹಿತಿಯನ್ನು ಅವರು ಅರ್ಜಿಯನ್ನು ಕೊಟ್ಟ ಐದು ನಿಮಿಷಗಳಲ್ಲಿ ಅವರಿಗೆ ದಾಖಲೆಗಳು ಸಿಗುವಂಥ ವ್ಯವಸ್ಥೆಯನ್ನು ಮಾಡುವ ಉಪ ಕ್ರಮವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಇದನ್ನು ಇನ್ನು 6 ತಿಂಗಳಲ್ಲಿ ಮಾಡುವ ಬಗ್ಗೆ, ,ಮತ್ತೆ ಇನ್ನೊಂದು ಬಹಳ ಮುಖ್ಯವಾದಂಥಾದ್ದು ಕೃಷಿ ಭೂಮಿಯ ಜೊತೆಗೆ ಅವುಗಳ ಮ್ಯಾಪ್ ಅನ್ನು, ನಕ್ಷಾಲೆಯನ್ನು ಹಿಂಬದಿಯಲ್ಲಿ ಕೊಡುವಂಥಾದ್ದರ ಬಗ್ಗೆಯೂ ನಾವು ಆಲೋಚನೆಯನ್ನು ಮಾಡುತ್ತಿದ್ದೇವೆ. ಆ ಒಂದು ಸೌಲಭ್ಯವನ್ನು ಹೆಚ್ಚು ವಿಸ್ತರಣೆ ಮಾಡಿ, ಗ್ರಾಮೀಣ ಭಾಗದ ಜನರಿಗೆ, ರೈತರಿಗೆ, ಅನುಕೂಲವನ್ನು ನಾವು ಈ ಯೋಜನೆ ಮುಖಾಂತರ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಈಗ ಗಣಕೀಕೃತ ಪಹಣಿಯನ್ನು ಕೊಡುವಂಥಾದ್ದು ನಡೆಯುತ್ತಿದೆ. ಆದರೆ, ಕಂಪ್ಯೂಟರ್‌ನಲ್ಲಿ ಅನೇಕ ಮಾಹಿತಿಗಳು ಫೀಡ್ ಆಗಲಿಕ್ಕೆ ವಿಪರೀತ ಲೇಟ್ ಆಗುತ್ತಿದೆ. ಇದನ್ನು ಸರಿ ಮಾಡದಿದ್ದರೆ ರೈತರಿಗೆ ವಿಪರೀತ ಕಿರಿಕಿರಿಯಾಗುತ್ತದೆ. ಇದನ್ನು ಪ್ರೈವೇಟೈಸ್ ಮಾಡಬೇಕು ಎನ್ನುವುದರ ಬಗ್ಗೆ ಹಿಂದಿನ ಸರ್ಕಾರದಲ್ಲೂ ವಿಶೇಷವಾದಂಥ ಒತ್ತು ಇತ್ತು. ಇದನ್ನು ಪ್ರೈವೇಟ್‌ನವರಿಗೆ ಕೊಟ್ಟು, ಅವರೂ ಕೂಡ ಕಂಪ್ಯೂಟರ್ ಇಟ್ಟುಕೊಂಡು ಪಹಣಿಯನ್ನು ಪಂಚಾಯತ್ ಮಟ್ಟದಲ್ಲಿ ಕೊಡುವ ಹಾಗೆ ವ್ಯವಸ್ಥೆಯನ್ನು ರೂಪಿಸಬೇಕು ಎನ್ನುವಂಥಾದ್ದು ಇತ್ತು. ಆ ರೀತಿ ಮಾಡಿದರೆ ನಮ್ಮ ಕಛೇರಿಗಳಿಗೆ ಬರ್ಡನ್ ಕಡಿಮೆಯಾಗುತ್ತದೆ. ತಾಲ್ಲೂಕು ಕಛೇರಿಗಳಲ್ಲಿ ಪಹಣಿ ತೆಗೆದುಕೊಳ್ಳಲು ಬಹಳ ಉದ್ದುದ್ದನೆಯ ಕ್ಯೂ ಇರುತ್ತದೆ. ಪ್ರೈವೇಟ್‌ನವರೂ ಕೂಡ ಅದನ್ನು ಕೊಡುವ ಹಾಗೆ ವ್ಯವಸ್ಥೆ ಮಾಡಿ, ಇದಕ್ಕೆ ಪ್ರೈವೇಟ್‌ನವರಿಗೆ ಸ್ವಲ್ಪ ಕಮೀಷನ್ ಕೊಡುವ ಹಾಗೆ ವ್ಯವಸ್ಥೆಯನ್ನು ರೂಪಿಸಿದರೆ ತುಂಬ ಒಳ್ಳೆಯದಾಗುತ್ತದೆ. ವಿಶೇಷವಾಗಿರತಕ್ಕಂಥ ಒತ್ತನ್ನು ಕೊಟ್ಟು ನಮ್ಮ ರಾಜ್ಯದಲ್ಲಿ ಈ 'ಭೂಮಿ', ಯೋಜನೆಯನ್ನು ಜಾರಿಗೆ ತಂದಿರತಕ್ಕಂಥಾದ್ದು ಅಭಿನಂದನಾರ್ಹವಾದಂಥ ಒಂದು ಕೆಲಸ. ಆದರೆ ಇದಕ್ಕೆ ಸ್ವಲ್ಪ ಮಾಡಿಫಿಕೇಷನ್ ಮಾಡುವಂಥಾದ್ದನ್ನು ಆದಷ್ಟು ಬೇಗ ಮಾಡಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ ಬಂಗೇರ : ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅದನ್ನು ತಂದಾಗ ಎಲ್ಲರಿಗೂ ಅನುಕೂಲವಾಗುತ್ತದೆ. ಕರೆಂಟ್ ಬಿಲ್‌ಗಳನ್ನು ಕಟ್ಟಲಿಕ್ಕೆ ಕೂಡ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಖಾಸಗಿಯವರು ಗ್ರಾಮಪಂಚಾಯಿತಿ ಮಟ್ಟದಲ್ಲಿ ಕೊಟ್ಟರೆ, ಅವರ ಜೀವನಕ್ಕೂ ಒಂದು ದಾರಿಯಾಗುತ್ತದೆ. ಹಾಗಾಗಿ, ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎ.ಬಿ. ಪಾಟೀಲ್ : ಹೋಬಳಿ ಮಟ್ಟದಲ್ಲಿ ಪಹಣಿಗಳನ್ನು ಕೊಡಬೇಕು, ಗ್ರಾಮಾಂತರದ ಜನರಿಗೆ ಅನುಕೂಲವಾಗಬೇಕೆಂದು ಕಂದಾಯ ಸಚಿವರು ಹೇಳಿದರು. ಖಾಸಗಿಯವರಿಗೆ ಕೊಡುವ ಇನ್ನೊಂದು ವಿಚಾರವನ್ನೂ ಅವರು ಹೇಳಿದರು. ಈಗ ನೀವು ಅದನ್ನು ಯಾರಿಗೆ ಕೊಡುತ್ತಿದ್ದೀರಿ? ಇದನ್ನು ರಾಜ್ಯದೆಲ್ಲೆಡೆ ದೊಡ್ಡ ದೊಡ್ಡ ಕಾಂಟ್ರಾಕ್ಟರ್‌ಗಳಿಗೆ ಕೊಟ್ಟರೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ಬಹಳಷ್ಟು ಜನ ನಿರುದ್ಯೋಗಿಗಳಿದ್ದಾರೆ. ಅಂಥ ಜನರಿಗೆ ಕೊಟ್ಟರೆ ನಿರುದ್ಯೋಗ ಸಮಸ್ಯೆಯೂ ಕಡಿಮೆಯಾಗುತ್ತದೆ. ಅದನ್ನು ಬಿಟ್ಟು ಯಾರೋ ಒಬ್ಬ ದೊಡ್ಡ ಕಾಂಟ್ರಾಕ್ಟರ್‌ಗೆ ಕೊಟ್ಟರೆ

ಸರಿಯಾಗುವುದಿಲ್ಲ. 'ಮಾಹಿತಿ ಸಿಂಧು' ಯೋಜನೆಯಲ್ಲಿ ದೊಡ್ಡ ದೊಡ್ಡ ಕಂಪನಿಯವರಿಗೆ ಕೊಟ್ಟಿದ್ದಾರೆ. ಆ ರೀತಿ ಮಾಡುವುದಕ್ಕೆ ಹೋಗಬೇಡಿ. ಯಾರು ನಿರುದ್ಯೋಗಿಗಳಿದ್ದಾರೆ, ಅವರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಹಾಗೂ ಈ ಸಮಸ್ಯೆಯೂ ಕೂಡ ಬಗೆಹರಿಯುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ಎಲ್ಲರೂ ಹೀಗೆ ನಿಂತುಕೊಂಡರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ಮುಂಡರಗಿ ಎ ಪಿ ಎಂ ಸಿ ಯವರು ನಿಮಗೆ ಒಂದು ಪರ್ಮಿಷನ್ ಕೇಳಿದ್ದಾರೆ. ಅದನ್ನು ನಮಗೆ ಕೊಟ್ಟರೆ ನಾವು ಕೇವಲ 5 ರೂಪಾಯಿಗಳಲ್ಲಿ ಮಾಡುತ್ತೇವೆ ಎಂದು ಪರ್ಮಿಷನ್ ಕೇಳಿದ್ದಾರೆ. ಹಾಗಾಗಿ, ಎ ಪಿ ಎಂ ಸಿ ಗಳವರಿಗೆ ಕೊಟ್ಟರೆ, ಈಗ ಎರಡು ರೂಪಾಯಿಗಳಿಗೆ ಕೊಡುತ್ತಿರುವಂಥಾದ್ದನ್ನು ಫ್ರೀಯಾಗಿಯೇ ಕೊಡಬಹುದು. ಆ ಕಾರಣದಿಂದ ನೀವು ಅದನ್ನು ಎ ಪಿ ಎಂ ಸಿ ಯವರಿಗೆ ಕೊಟ್ಟರೆ ಸರಿಯಾಗುತ್ತದೆ. ನೀವು 15 ರೂಪಾಯಿ ಎಂದು ಹೇಳಿದರೂ ಅವರು 5 ರೂಪಾಯಿಗೇ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಇಷ್ಟೇ ಅಲ್ಲ, ನಮ್ಮಲ್ಲಿ ಯಾರು ಹೆಚ್ಚು ಮಾಲನ್ನು ಹೊಡೆಯುತ್ತಾರೆ ಅಂಥ ರೈತರಿಗೆ ಫ್ರೀಯಾಗಿ ಕೊಡುತ್ತೇವೆ ಎಂದು ಕೂಡ ಅವರು ನಿಮ್ಮನ್ನು ಕೇಳಿದ್ದಾರೆ. ದಯವಿಟ್ಟು ಅದನ್ನು ಕನ್ಸಿಡರ್ ಮಾಡಿ, ಅವರಿಗೆ ಪರ್ಮಿಷನ್ ಕೊಡಿ.

ಶ್ರೀ ವಿ. ಸುನೀಲ್ ಕುಮಾರ್ : ಈಗಾಗಲೇ ಇರುವ ಗಣಕೀಕೃತ ಕೇಂದ್ರಗಳಲ್ಲಿ, ಸಾಫ್ಟ್‌ವೇರ್‌ನಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲೇ ಸಾಫ್ಟ್‌ವೇರ್‌ನ ಪ್ರಾಬ್ಲಂ ಇರುವುದರಿಂದ ವಾರಗಟ್ಟಲೆ ಆರ್ ಟಿ ಸಿ ಗಳು ಸಿಕ್ಕುತ್ತಿಲ್ಲ. ಹೀಗಾಗಿ, ರೈತರು ನಾಲ್ಕೈದು ಸಾರಿ ತಾಲ್ಲೂಕು ಕಛೇರಿಗೆ ತಿರುಗಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ತಹಶೀಲ್ದಾರರಿಗೆ ದೂರುಗಳನ್ನು ಹೇಳಿದರೂ ಕೂಡ ಇಲ್ಲಿಯವರೆಗೆ ವ್ಯವಸ್ಥೆ ಸರಿಯಾಗಿಲ್ಲ. ಹಾಗಾಗಿ, ಸಾಫ್ಟ್‌ವೇರ್‌ನಲ್ಲಿರುವ ಪ್ರಾಬ್ಲಂ ಕಡೆಯೂ ಕೂಡ ತಕ್ಷಣ ಸರ್ಕಾರ ಗಮನ ಹರಿಸಬೇಕು. ಈಗಿರುವ 175 ಕೇಂದ್ರಗಳಿಂದ 800 ಕೇಂದ್ರಗಳಿಗೆ ಹೆಚ್ಚಿಸುವ ವ್ಯವಸ್ಥೆ ಸರಿ. ಆದರೆ ಟೆಕ್ನಾಲಜಿ ಸರಿ ಮಾಡಲಿಲ್ಲವೆಂದರೆ ಬಹಳಷ್ಟು ಸಮಸ್ಯೆಗಳು ನಿರ್ಮಾಣವಾಗುತ್ತವೆ. ಆ ಹಿನ್ನಲೆಯಲ್ಲಿ ಕೂಡ ಸರ್ಕಾರ ಇದರ ಬಗ್ಗೆ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್ : ನನ್ನದೂ ಒಂದು ಪ್ರಶ್ನೆ ಇದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಇದೇ ರೀತಿ ಬೇರೆ ಬೇರೆ ವಿಚಾರಗಳಲ್ಲೂ ಎಂದರೆ ವಿಡೋ ಪೆನ್‌ಷನ್, ಓಲ್ಡ್ ಏಜ್ ಪೆನ್‌ಷನ್ ಎಲ್ಲದರಲ್ಲೂ ಕಂಪ್ಯೂಟರೈಸೇಷನ್ ಮಾಡಿ ಜನರಿಗೆ ಅನುಕೂಲ ಮಾಡಿಕೊಡುವ ವಿಚಾರವನ್ನು ಹೇಳಿದರು. ನಮ್ಮ ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಆಗುತ್ತಿರತಕ್ಕಂಥ ಭ್ರಷ್ಟಾಚಾರ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಸಬ್-ರಿಜಿಸ್ಟಾರ್ ಕಛೇರಿಗಳಲ್ಲೂ ಕಂಪ್ಯೂಟರೈಸ್ ಮಾಡಬೇಕು ಎನ್ನುವ ಉದ್ದೇಶ ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಂದೆ ಇದೆ. ಜನರಿಗೆ ಸರಳವಾಗಿ

ಕೆಲಸಗಳಾಗಬೇಕು ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದಕ್ಕೋಸ್ಕರ ಎ ಟಿ ಎಂ ಗಳ ರೀತಿಯ ಒಂದು ಟೆಕ್ನಾಲಜಿಯನ್ನು ಉಪಯೋಗಿಸಿಕೊಂಡು ಮಾಡಬೇಕು ಎನ್ನುವ ಉದ್ದೇಶ ರೆವಿನ್ಯೂ ಡಿಪಾರ್ಟ್‌ಮೆಂಟ್ ಮುಂದೆ ಇದೆ. ಅದನ್ನೂ ಕೂಡ ಕಾರ್ಯಗತ ಮಾಡುವಂಥಾದ್ದನ್ನು ಮಾನ್ಯ ಸಚಿವರು ಮಾಡಬೇಕು. ತಾವು ಇವತ್ತಿನ ಪತ್ರಿಕೆಯನ್ನು ನೋಡಿರಬಹುದು, ಅದರಲ್ಲಿ ವರ್ಲ್ಡ್ ಬ್ಯಾಂಕಿನ ಒಂದು ರಿಪೋರ್ಟ್ ಏನಿದೆ, ಎಂದರೆ ನಮ್ಮ ಸಬ್–ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ 79 ಪರ್ಸೆಂಟ್ ಭ್ರಷ್ಟಾಚಾರ ಇದೆ ಎಂದು ಬರೆದಿದ್ದಾರೆ. ಒಂದು ಪರ್ಸೆಂಟ್ ಕಟ್ಟಲೇಬೇಕು ಎಂದು ಫಿಕ್ಸ್ ಮಾಡಿಬಿಟ್ಟಿದ್ದಾರೆ. ಯಾರೇ ರಿಜಿಸ್ಟ್ರೇಷನ್‌ಗೆ ಹೋದರೂ ಕೂಡ ಒಂದು ಪರ್ಸೆಂಟ್ ಭ್ರಷ್ಟಾಚಾರದ ಸೆಸ್ ಕಟ್ಟಲೇಬೇಕಾದಂಥ ಪರಿಸ್ಥಿತಿ ಇದೆ. ಇದಕ್ಕೆ ನಾವು ಯಾರನ್ನೂ ದೂಷಣೆ ಮಾಡುತ್ತಿಲ್ಲ. ವ್ಯವಸ್ಥೆ ಹಾಳಾಗಿದೆ. ಆ ವ್ಯವಸ್ಥೆಯನ್ನು ಸರಿ ಮಾಡಿದಾಗ ಮಾತ್ರ ಈ ಭ್ರಷ್ಟಾಚಾರವನ್ನು ಕಂಟ್ರೋಲ್ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ, ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಗಣಕೀಕೃತ ವ್ಯವಸ್ಥೆ ಮಾಡುವುದರ ಮುಖಾಂತರ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ತಮ್ಮ ಮುಂದೆ ಪ್ರಸ್ತಾವನೆ ಇದೆಯೇ ಮತ್ತು ಅದರ ಬಗ್ಗೆ ತಾವು ಮಾಹಿತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದು ಸವದಿ : ಎಲ್ಲಾ ಗ್ರಾಮಗಳಲ್ಲಿ ಗ್ರಾಮೀಣ ಪತ್ತಿನ ಸಹಕಾರಿ ಬ್ಯಾಂಕುಗಳಿವೆ. ಅವರು ಸದೃಢರಿದ್ದಾರೆ. ಎಲ್ಲಾ ವ್ಯವಸ್ಥೆಗಳನ್ನು ಸರ್ಕಾರ ಅವರಿಗೆ ಕೊಡಲಿ. ಇಂಥ ಸೊಸೈಟಿಗಳ ಮುಖಾಂತರ ಆರ್ ಟಿ ಸಿ ಕೊಟ್ಟರೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ : ಪಹಣಿಯಲ್ಲಿ ಏನಾದರೂ ತಪ್ಪುಗಳಿದ್ದರೆ ಅದನ್ನು ತಿದ್ದುಪಡಿ ಮಾಡುವಂಥ ಅಧಿಕಾರವನ್ನು ಉಪ ವಿಭಾಗಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಹೀಗಾಗಿ, ಗ್ರಾಮೀಣ ಪ್ರದೇಶಗಳ ರೈತರು ಎ.ಸಿ.ಗಳ ಹತ್ತಿರಕ್ಕೆ ಅಂದರೆ ಜಿಲ್ಲಾ ಕೇಂದ್ರಗಳಿಗೆ ಬರಬೇಕಾಗುತ್ತದೆ. ಇದಕ್ಕೆ ಮೊದಲು ಸು–ಮೋಟೋ ಆಗಿ ಅದನ್ನು ತಹಶೀಲ್ದಾರ್ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್ ಮಾಡಬೇಕು ಎಂದು ಇತ್ತು. ಕೆಲವು ಕಡೆ ಎರಡು ಎಕರೆಗೆ ಎರಡು ಗುಂಟೆ ಎಂದಿರುತ್ತದೆ, 5 ಎಕರೆಗೆ 5 ಗುಂಟೆ ಎಂದಿರುತ್ತದೆ, ಪಹಣಿ ಕಾಲಂನಲ್ಲಿ ಹೆಸರುಗಳು ಗ್ರಮೆಟಿಕಲ್ ಮಿಸ್ಟೇಕ್ ಆಗಿರುತ್ತವೆ. ಅದನ್ನು ಎ.ಸಿ. ಯವರು ತಿದ್ದುಪಡಿ ಮಾಡಬೇಕೆಂದು ಅಧಿಕಾರ ಕೊಟ್ಟಿರುವುದು ತಪ್ಪು. ದಯವಿಟ್ಟು ಅದನ್ನು ತಿದ್ದುಪಡಿ ಮಾಡಿ, ಪಹಣಿಯಲ್ಲಿ ತಪ್ಪುಗಳನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ತಹಶೀಲ್ದಾರ್‌ರವರು ತಿದ್ದುಪಡಿ ಮಾಡುವಂತೆ ಅಧಿಕಾರ ಹಸ್ತಾಂತರ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಡಾ: ಕೆ. ಅನ್ನದಾನಿ : ರೆವಿನ್ಯೂ ಇನ್ಸ್‌ಪೆಕ್ಟರ್ ತಿದ್ದುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸೂಕ್ತವಲ್ಲವೇ? ರೆವಿನ್ಯೂ ಇನ್ಸ್‌ಪೆಕ್ಟರ್ ಹಂತದಲ್ಲೇ ಅದನ್ನು ತಿದ್ದತಕ್ಕಂಥ ವ್ಯವಸ್ಥೆ ಮಾಡಿಕೊಟ್ಟರೆ ರೈತರಿಗೆ ಮತ್ತು ಬಡವರಿಗೆ ಅನುಕೂಲವಾಗುತ್ತದೆ. ಎ.ಸಿ. ಯವರು ತಿದ್ದಬೇಕೆಂದರೆ, ರೈತರು ಮತ್ತು ಬಡವರು ಜಿಲ್ಲಾ ಕೇಂದ್ರ ಕಛೇರಿಗಳಿಗೆ ಹೋಗಲಿಕ್ಕೆ ಬಸ್–ಚಾರ್ಜಿಗೂ ಹಣವಿರುವುದಿಲ್ಲ. ಆದ್ದರಿಂದ ದಯಮಾಡಿ, ರಾಜಸ್ವ ನಿರೀಕ್ಷಕರೇ ತಿದ್ದುಪಡಿ ಮಾಡುವ ಹಾಗೆ ವ್ಯವಸ್ಥೆ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಬಹಳಷ್ಟು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಈ ಒಂದು 'ಭೂಮಿ' ಯೋಜನೆ ಇಡೀ ರಾಜ್ಯದಲ್ಲಿ ಎಲ್ಲರ ಗಮನವನ್ನು ಸೆಳೆದಿದೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸದಸ್ಯರು ಇದರ ಬಗ್ಗೆ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆಂದರೆ, ಈ 'ಭೂಮಿ' ಯೋಜನೆ ಬಗ್ಗೆ ಎಷ್ಟೊಂದು ಕಳಕಳಿ ಇದೆ ಎನ್ನುವುದು ಅರ್ಥವಾಗುತ್ತದೆ. ಸದಸ್ಯರು ಮಾತನಾಡುವ ಕೆಲವೊಂದು ಲೋಪದೋಷಗಳ ಬಗ್ಗೆ ಹೇಳಿದರು. ಮಾನ್ಯ ಸುನೀಲ್ ಕುಮಾರ್‌ರವರು ತಮ್ಮ ಕಾರ್ಕಳ ತಾಲ್ಲೂಕಿನ ಬಗ್ಗೆ ಹೇಳಿದರು. ಈ ಹಿಂದೆ ಮಾನ್ಯ ಮಾಧುಸ್ವಾಮಿಯವರು ತಮ್ಮ ತುಮಕೂರು ಜಿಲ್ಲೆಯ ಬಗ್ಗೆ ಹೇಳಿದ್ದರು. ಇಂಥ ಲೋಪದೋಷಗಳು ಕಂಡುಬಂದಂಥ ಸಂದರ್ಭಗಳಲ್ಲಿ ತಕ್ಷಣವೇ ಆ ಕಂಪ್ಯೂಟರ್ ಅನ್ನು ಸರಿಯಾದ ರೀತಿಯಲ್ಲಿ ರಿಪೇರಿ ಮಾಡುವಂಥಾದ್ದು, ಸಾಫ್ಟ್‌ವೇರ್ ಅನ್ನು ಕರೆಕ್ಷನ್ ಮಾಡುವುದರ ಬಗ್ಗೆಯೂ ತಕ್ಷಣ ಕ್ರಮವನ್ನು ಕೈಗೊಳ್ಳುವಂಥ ವ್ಯವಸ್ಥೆ ನಮ್ಮಲ್ಲಿದೆ. ಬಹಳ ಕಡಿಮೆ ತಾಲ್ಲೂಕುಗಳಲ್ಲಿ ಈ ರೀತಿಯಾದಂಥ ದೂರುಗಳು ಬರುತ್ತಿವೆ. ಆದರೆ ಬಹಳಷ್ಟು ಕಡೆಗಳಲ್ಲಿ ಈ ವ್ಯವಸ್ಥೆ ಅಚ್ಚುಕಟ್ಟಿನಿಂದ ನಡೆಯುತ್ತಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಆಡಳಿತ ವ್ಯವಸ್ಥೆಯ ಸುಧಾರಣೆಗಾಗಿ, ಯುನೈಟೆಡ್ ನೇಷನ್ಸ್ ಈ 'ಭೂಮಿ' ಯೋಜನೆಗೆ ಅವಾರ್ಡ್ ಕೊಟ್ಟಿರುವಂಥಾದ್ದು ನಮ್ಮೆಲ್ಲರ ಅಭಿಮಾನದ ಸಂಗತಿ ಎನ್ನುವುದನ್ನು ಹೇಳುತ್ತಿದ್ದೇನೆ. ಇದರ ಕ್ರೆಡಿಟ್ ಇವತ್ತಿನ ಸರ್ಕಾರಕ್ಕೆ ಬರುವಂಥಾದ್ದು ಎಂದು ನಾನು ಹೇಳುತ್ತಿಲ್ಲ. ಹಿಂದಿನ ಸರ್ಕಾರವಿರಬಹುದು, ಅದರ ಹಿಂದಿನ ಸರ್ಕಾರವಿರಬಹುದು, ಮಾನ್ಯ ಸೋಮಶೇಖರ್‌ರವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಮಾಡಿದಂಥಾದ್ದು ಇರಬಹುದು, ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ಅನುಷ್ಠಾನಕ್ಕೆ ತಂದಂಥಾದ್ದು ಇರಬಹುದು ಅಥವಾ ಹಿಂದಿನ ಸರ್ಕಾರ ಅನುಷ್ಠಾನ ಮಾಡಿದಂಥಾದ್ದು ಇರಬಹುದು, ಒಟ್ಟಿನಲ್ಲಿ ಇವತ್ತಿನವರೆಗೆ ಎಲ್ಲಾ ಸರ್ಕಾರಗಳವರು ಈ 'ಭೂಮಿ' ಯೋಜನೆಯ ಅನುಷ್ಠಾನದ ಬಗ್ಗೆ ಹೆಚ್ಚು ಚಿಂತನೆ ಮಾಡಿದುದರಿಂದ, ಈ ಅವಾರ್ಡ್ ಬಂದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇದರ ಬಗ್ಗೆ ಇನ್ನೂ ಸುಧಾರಣೆಯನ್ನು ಮಾಡುವ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಇನ್ನೂ ಹಲವಾರು ವಿಚಾರಗಳನ್ನು ಇಲ್ಲಿ ಹೇಳಿದರು. ಎಸ್.ಎಸ್. ಪಾಟೀಲ್‌ರವರು ಮುಂಡರಗಿ ಎ ಪಿ ಎಂ ಸಿ ಯವರು ಮುಂದೆ ಬಂದಿದ್ದಾರೆ ಎಂದು ಹೇಳಿದರು, ಖಾಸಗಿ ವ್ಯಕ್ತಿಗಳಿಗೆ ಕೊಡುವ ಬಗ್ಗೆ ಮಾನ್ಯ ಎ.ಬಿ. ಪಾಟೀಲ್‌ರವರು ಹೇಳಿದರು, ಖಾಸಗಿ ವ್ಯಕ್ತಿಗಳಿಗೆ ಈ ವ್ಯವಸ್ಥೆಯನ್ನು ಕೊಡುವಂಥಾದ್ದರ ಬಗ್ಗೆ ಆರಗ ಜ್ಞಾನೇಂದ್ರರವರು ಹೇಳಿದರು. ಇದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಕಾಸ್ಟ್ ಕಡಿಮೆಯಾಗುವಂಥ ದೃಷ್ಟಿಯಿಂದ ದೊಡ್ಡ ದೊಡ್ಡ ಕಂಪನಿಗಳ ಬಗ್ಗೆ ವಿಚಾರ ಮಾಡುವಂಥಾದ್ದು, ನಿರುದ್ಯೋಗಿ ಯುವಕರಿಗೆ ಅನುಕೂಲವಾಗುವಂಥಾದ್ದು, ಎ ಪಿ ಎಂ ಸಿ ಯವರು ಕಡಿಮೆ ರೇಟ್‌ನಲ್ಲಿ ಮಾಡುವಂಥ ಪ್ರಪೋಸಲ್‌ಗಳು ಬಂದಾಗ, ಅವುಗಳನ್ನೆಲ್ಲಾ ನಾವು ಕನ್ಸಿಡರ್ ಮಾಡಿ ಯಾವ ರೀತಿ ಈ ವ್ಯವಸ್ಥೆಗೆ ಚಾಲನೆ ಕೊಡಬೇಕು ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಈ ವ್ಯವಸ್ಥೆಯ ಸುಧಾರಣಾ ಕ್ರಮವಾಗಿ ಇದನ್ನು ಗ್ರಾಮಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆನ್ನುವ ಈ ಸಂದರ್ಭದಲ್ಲಿ

ಮೊದಲ ಹಂತವಾಗಿ ಇದನ್ನು ಹೋಬಳಿ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇವೆ. ಇನ್ನೊಂದು ಬಹಳ ಮಹತ್ವದ ಸಂಗತಿ ಎಂದರೆ ಈ 'ಭೂಮಿ' ಯೋಜನೆಗೆ ನಾವು ಸರ್ಕಾರದಿಂದ ಅಂದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಯಾವುದೇ ಅನುದಾನವನ್ನು ತೆಗೆದುಕೊಳ್ಳುತ್ತಿಲ್ಲ. ತನ್ನದೇ ಆದಂಥ ಆದಾಯದಿಂದ ಈ ವ್ಯವಸ್ಥೆಯನ್ನು ನಾವು ನಿರ್ವಹಿಸಿಕೊಂಡು ಹೋಗುತ್ತಿದ್ದೇವೆ. ಹಾಗಾಗಿ, ತನ್ನ ಸ್ವಂತ ಕಾಲಿನ ಮೇಲೆ ನಿಲ್ಲುವಂಥ ವ್ಯವಸ್ಥೆಯನ್ನು ಈ 'ಭೂಮಿ' ಯೋಜನೆಯಲ್ಲಿ ನಾವು ಕೈಗೊಂಡಿದ್ದೇವೆ. ಮಾನ್ಯ ಆರಗ ಜ್ಞಾನೇಂದ್ರರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು, ಇದನ್ನು ಸಂಪೂರ್ಣವಾಗಿ ಖಾಸಗಿ ವ್ಯಕ್ತಿಗಳಿಗೆ .....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಕಂಪ್ಯೂಟರ್‌ಗಳನ್ನು ಕೊಡುತ್ತಿದ್ದಾರೆ. ಹಾಗಾಗಿ, ನೀವು ಇದನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡುವ ವ್ಯವಸ್ಥೆ ಮಾಡಿ. ಯಾವ ಅರ್ಜಿಯನ್ನು ಕೊಟ್ಟರೂ ಸಹ ಅದು ಸೀನಿಯಾರಿಟಿ ಮೇಲೆ ಬರುವಾಗ 3–4 ತಿಂಗಳಾಗುತ್ತದೆ. ಆದರೆ ಗ್ರಾಮ ಪಂಚಾಯಿತಿಗಳಿಗೆ ಕೊಟ್ಟರೆ ಒಂದು ದಿವಸದಲ್ಲಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಇದನ್ನು ಗ್ರಾಮ ಪಂಚಾಯಿತಿಗಳಲ್ಲಿ ಕೊಡುವ ವ್ಯವಸ್ಥೆ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಅದಕ್ಕೆ ಬೇರೆ ಬೇರೆ ಸಾಫ್ಟ್‌ವೇರ್ ಅನ್ನು ಹಾಕಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಈವತ್ತು 800 ಹೋಬಳಿ ಕೇಂದ್ರಕ್ಕೆ ವಿಸ್ತರಣೆ ಮಾಡುತ್ತಿದ್ದೇವೆ. ನಾಳೆ ಅದರ ಫಲಿತಾಂಶವನ್ನು ನೋಡಿ ಅದನ್ನು ಗ್ರಾಮಪಂಚಾಯಿತಿಗೆ ವಿಸ್ತರಣೆ ಮಾಡಬಹುದೆಂಬುದರ ಬಗ್ಗೆ thinking ಇದೆ. ಇದನ್ನು ಇನ್ನೊಂದು ಪ್ರಯೋಗವಾಗಿ ಹೋಬಳಿ ಮಟ್ಟಕ್ಕೆ ವಿಸ್ತರಣೆ ಮಾಡುತ್ತಿದ್ದೇವೆ. ಅದರ ಫಲಿತಾಂಶವನ್ನು ನಾವು ನೋಡೋಣ. ಆಮೇಲೆ ಗ್ರಾಮಪಂಚಾಯಿತಿ ಮಟ್ಟಕ್ಕೆ ತೆಗೆದುಕೊಂಡು ಹೋಗವಂಥಾದ್ದು. ಆದರೆ ಮಾನ್ಯ ಶಾಸಕರಾದ ಆರಗ ಜ್ಞಾನೇಂದ್ರರವರು ಖಾಸಗಿ ವ್ಯಕ್ತಿಗಳಿಂದಲೇ ಸಂಪೂರ್ಣವಾಗಿ ಕೊಡಿಸುವಂಥದ್ದು ಆಗಬೇಕೆಂದು ಹೇಳಿದರು. ಆದರೆ, ಇವತ್ತು ನಾವು ಕೇವಲ maintenance ಸಲುವಾಗಿ ಮಾತ್ರ ಕೊಡುತ್ತಿದ್ದೇವೆ. ಅವರು computer investment ಮಾಡಬೇಕು, ಅದನ್ನು ನಮಗೆ supply ಮಾಡಬೇಕು. ಉಳಿದೆಲ್ಲಾ control ಸರ್ಕಾರದ ಕಡೆಯಿಂದಲೇ ಇರುತ್ತದೆ. ಏಕೆಂದರೆ ಇಲ್ಲಿ ಬಹಳ ಮುಖ್ಯವಾದಂಥ revenue records ಇರುತ್ತದೆ. ಅವು ತಹಶೀಲ್ದಾರ್ ಕೈಕೆಳಗೆ ಇರುವಂಥದ್ದು, D.C. under ನಲ್ಲಿರುವಂಥ revenue ದಾಖಲೆಗಳನ್ನು ನಾವು ಖಾಸಗಿಯವರ ಕೈವಶ ಮಾಡಿದರೆ ನಾಳೆ ಬಹಳಷ್ಟು ಅನಾಹುತಗಳಾಗುವ ಸಾಧ್ಯತೆಯಿದೆ. ಕೇವಲ ಅವರು investment ಮಾಡಿ ಸರ್ಕಾರಗಳು ಏನು ದಾಖಲೆಗಳನ್ನು ಕೊಟ್ಟಿರುತ್ತವೆ, ಆ ದಾಖಲೆಗಳನ್ನು supply ಮಾಡುವುದು ಮಾತ್ರ ಅವರ duty ಆಗಿರುತ್ತದೆ. ಇನ್ನೂ ಹೆಚ್ಚಿನ ಅಧಿಕಾರವನ್ನು ಅವರಿಗೆ ಕೊಟ್ಟರೆ ಅದರಿಂದ ಅನಾಹುತಗಳಾಗುವುದಕ್ಕೆ ಸಾಧ್ಯತೆ ಇದೆ. ಹೀಗಾಗಿ ಆ ದಿಶೆಯಲ್ಲಿ ಇವತ್ತು ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಇನ್ನು ಗಣಕೀಕೃತ ಪಹಣಿಯಲ್ಲಿ ಏರಿಯಾ ಬದಲಾವಣೆ ಆಗಿರುವುದು, ಹೆಸರು ಬದಲಾವಣೆ ಆಗಿರುವಂಥ ಕೆಲವೊಂದು ಲೋಪದೋಷಗಳು ಇದ್ದದ್ದನ್ನು ಸರಿಪಡಿಸುವುದಕ್ಕೆ ಇದು Assistant Commissioner ರವರ ಮಟ್ಟದಲ್ಲಿ ತಹಶೀಲ್ದಾರರಿಗೆ ಅಧಿಕಾರವಿದೆ. ಯಾವುದೇ ಒಂದು entry ಹೆಚ್ಚುಕಡಿಮೆಯಾಗಿದ್ದರೆ ತಕ್ಷಣವೇ ಅದನ್ನು correction

ಮಾಡುವ ಅಧಿಕಾರ ತಹಶೀಲ್ದಾರ್‌ರಿಗೆ ಇದೆ. ನಾಳೆ ತಹಶೀಲ್ದಾರ್ ಏನಾದರೂ ತಪ್ಪು ಮಾಡಿದರೆ Assistant Commissioner ಕಡೆಗೆ ಅದನ್ನು appeal ಮಾಡಬೇಕಾಗುತ್ತದೆ. ಅದರ ಮೇಲೆ review D.C. ಮಾಡಬೇಕಾಗುತ್ತದೆ. ಇದನ್ನು ತಹಶೀಲ್ದಾರ್ ಮಟ್ಟದಲ್ಲಿ ನಾವು ಯಾವಾಗಲೂ correction ಮಾಡಲಿಕ್ಕೆ ಸಾಧ್ಯವಿದೆ. ಹೀಗಾಗಿ ಇದರಲ್ಲಿ ಯಾವುದೇ ತೊಂದರೆಯಾಗಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಭೂಮಿ ಯೋಜನೆ ಬಹಳ ಯಶಸ್ವಿಯಾಗಿ ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವಿಷಯ : ಮೌಲ್ಯವರ್ಧಿತ ತೆರಿಗೆಯಿಂದಾದ ನಷ್ಟವನ್ನು ತುಂಬಿಕೊಡುವ ಬಗ್ಗೆ.

208 (1278) ಶ್ರೀ ಎಂ. ಮಹದೇವಪ್ಪ (ಕೃಷ್ಣರಾಜನಗರ): ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೌಲ್ಯವರ್ಧಿತ ತೆರಿಗೆ (ವ್ಯಾಟ್)ಯನ್ನು ರಾಜ್ಯದಲ್ಲಿ ಜಾರಿಗೆ ತಂದ ನಂತರ ಕೇಂದ್ರ ಸರ್ಕಾರದಿಂದ ಪಡೆದಿರುವ ಆರ್ಥಿಕ ಪ್ರಯೋಜನಗಳು ಯಾವುವು;

ಆ) ವ್ಯಾಟ್‌ನಿಂದಾದ ನಷ್ಟ ತುಂಬಿಕೊಳ್ಳಲು ರಾಜ್ಯ ಸರ್ಕಾರವು ವ್ಯಾಟ್ ವಿಸ್ತರಣೆಗೆ ಕೈಗೊಂಡ ಕ್ರಮಗಳು ಏನು; ಮಾಹಿತಿ ಒದಗಿಸುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಮೌಲ್ಯವರ್ಧಿತ ತೆರಿಗೆ (ವ್ಯಾಟ್)ಯನ್ನು ರಾಜ್ಯದಲ್ಲಿ ದಿನಾಂಕ: 01.04.2005 ರಿಂದ ಜಾರಿಗೆ ತರಲಾಗಿದೆ. ವ್ಯಾಟ್ ಜಾರಿಯಿಂದಾಗಿ ರಾಜ್ಯ ಸರ್ಕಾರಕ್ಕೆ ಆದ ನಷ್ಟವನ್ನು ಕೇಂದ್ರ ಸರ್ಕಾರವು 1272.20 ಕೋಟಿ ರೂ.ಗಳನ್ನು ನಷ್ಟ ಪರಿಹಾರವಾಗಿ ಪಾವತಿಸುವುದರ ಮೂಲಕ ಆರ್ಥಿಕ ಪ್ರಯೋಜನ ಒದಗಿಸಿದೆ.

ಆ) ವ್ಯಾಟ್ ಕಾಯ್ದೆಯಡಿಯಲ್ಲಿ ತೆರಿಗೆ ಪಾವತಿ ಮಾಡುವವರ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯ ಅಂಗವಾಗಿ ವ್ಯಾಟ್ ವಿಸ್ತರಣೆಗಾಗಿ ಸಮೀಕ್ಷೆ ಕೈಗೊಂಡು ವ್ಯಾಟ್ ಕಾಯ್ದೆಯಡಿ 1,65,679 ವ್ಯಾಪಾರ ಮಳಿಗೆಗಳಿಗೆ ಭೇಟಿ ನೀಡಲಾಗಿದೆ, ಮತ್ತು 58,202 ನೋಂದಣಿ ಮಾಡದಿರುವ ವರ್ತಕರುಗಳನ್ನು ಗುರುತಿಸಿ ಅವುಗಳನ್ನು ನೋಂದಣಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇದಲ್ಲದೆ, ತೆರಿಗೆ ಪರಿಪಾಲನೆಯನ್ನು ಹೆಚ್ಚಿಸುವ ಉದ್ದೇಶದಿಂದ ಪರೀಕ್ಷಾರ್ಥ ಖರೀದಿ ಮತ್ತು ವ್ಯಾಪಾರಸ್ಥರ ಸ್ಥಳ ತಪಾಸಣೆ ಕೂಡ ಹೆಚ್ಚಿಸಲಾಗಿದೆ. 2006–07ನೇ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಒಟ್ಟು ಸುಮಾರು 503 ಪರೀಕ್ಷಾರ್ಥ ಖರೀದಿಗಳನ್ನು ಮತ್ತು ಸುಮಾರು 325 ವ್ಯಾಪಾರಸ್ಥರ ಸ್ಥಳಗಳನ್ನು ತನಿಖೆಗೊಳಪಡಿಸಲಾಗಿದೆ.

ರಾಜ್ಯ ಮಟ್ಟದಲ್ಲಿ ಬೆಂಗಳೂರಿನಲ್ಲಿ ಅಲ್ಲದೇ ರಾಜ್ಯ ಇತರ ಎಲ್ಲಾ ಜಿಲ್ಲೆಗಳ ಕೇಂದ್ರ ಸ್ಥಾನಗಳಲ್ಲಿ ಮತ್ತು ಪ್ರಮುಖ ತಾಲ್ಲೂಕುಗಳ ಕೇಂದ್ರ ಸ್ಥಳಗಳಲ್ಲಿ ಹೊಸ ತೆರಿಗೆ ವ್ಯವಸ್ಥೆಯ ವಿವರಗಳನ್ನು ಸಂಬಂಧಪಟ್ಟ ಎಲ್ಲಾ ವ್ಯಾಪಾರಿಗಳಿಗೆ ನೀಡಲು ವಿಚಾರ ಸಂಕೀರ್ಣಗಳನ್ನು ಮತ್ತು ಚರ್ಚಾಕೂಟಗಳನ್ನು ನಡೆಸಲಾಗಿದೆ. ಇಂತಹ ಸಭೆಗಳಲ್ಲದೇ, ಪ್ರತಿ ವ್ಯಾಪಾರಿಗಳಿಗೂ ವ್ಯಾಟ್ ಸಂಬಂಧಿತ ಮಾಹಿತಿಯನ್ನೊಳಗೊಂಡ ಕೈಪಿಡಿ ಹಂಚುವ ವ್ಯವಸ್ಥೆಗಳನ್ನು ಮಾಡಲಾಗಿದೆ. ದೂರದರ್ಶನ,